ಸಂಪಾದಕೀಯ

ಸಂತರು ನಡೆದ ಹಾದಿ – ೩

# ವಿವೇಕಾನಂದರ ಶಕ್ತಿಸಂದೇಶ



ಭಾರತ ಸ್ವಾತಂತ್ರ್ಯ ಸಂಗ್ರಾಮದ ಮುಂಬೆಳಗಿನಲ್ಲಿ ಮೂಡಿ ಬಂದ ಉಜ್ವಲ ಧ್ರುವತಾರೆಯೇ ಸ್ವಾಮಿ ವಿವೇಕಾನಂದರು. ಕೇವಲ ನಲವತ್ತು ವರ್ಷಗಳ ಜೀವಿತ ಕಾಲದಲ್ಲಿ ಅವರು ಜಗತ್ತಿನೆಲ್ಲೆಡೆ ಒಂದು ನೂತನ ಶಕ್ತಿಸಂಚಾರವನ್ನೇ ಮಾಡಿದರು. ಅನೇಕರ ದೃಷ್ಟಿ ಬದಲಾಯಿತು; ನೂರಾರು ಮಂದಿ ಅವರ ಅನುಯಾಯಿಗಳಾದರು. ಎಷ್ಟೋ ಮಂದಿ ಯುವಕರ ಪಾಲಿಗೆ ಸ್ವಾಮೀಜಿಯವರ ವಾಣಿ ಶಕ್ತಿಪೂರ್ಣ ಬೆಳಕಿನ ಕಿಡಿಯಾಗಿದ್ದಿತು. ಅವರ ಜೀವನದ ಒಂದೊಂದು ಘಟನೆಯೂ ದಂತಕತೆಯಾಯಿತು; ಹೊಸ ಅರ್ಥ, ಹೊಸ ಸಂದೇಶವನ್ನು ನೀಡುವ ಮೈಲಿಗಲ್ಲಾಯಿತು. ಸ್ವಾಮೀಜಿ ನೀಡಿದ ಸಂದೇಶಗಳಲ್ಲಿ ಮಹತ್ವಪೂರ್ಣವಾದ ಅಂಶಗಳೇನು? ನಮ್ಮ ಜನಜೀವನದಲ್ಲಿ ಅವು ಹೇಗೆ ಪ್ರಸ್ತುತವಾಗುತ್ತವೆ? ಅನುಭವದ ಆಳದಿಂದ ಹೊರಹೊಮ್ಮಿದ ಈ ಸಂದೇಶಗಳು ಕಾಲ–ದೇಶಗಳ ಮಿತಿಯನ್ನು ಮೀರಿ ಪ್ರಭಾವ ಬೀರುವುದೆ? ಈ ಕೆಲವು ಪ್ರಧಾನ ಸಂಗತಿಗಳನ್ನಿಲ್ಲಿ ಚಿಂತಿಸೋಣ.

## 'ಮಾನವನೇ ದೇವರು'

ಎಲ್ಲ ಜೀವಿಗಳ ಅಂತರಂಗದಲ್ಲಿ ಭಗವಂತನು ಅಡಗಿದ್ದಾನೆ ಎಂಬುದು ವೇದಾಂತ ತತ್ತ್ವದ ತಿರುಳು. ಈ ತತ್ತ್ವವನ್ನು ಉಪನಿಷತ್ತು, ಗೀತೆ ಹಾಗೂ ಎಲ್ಲ ಸಂತ–ಮಹಾತ್ಮರು ಸಂದೇಹಕ್ಕೆಣೆಯಿಲ್ಲದಂತೆ ಸಾರಿದ್ದಾರೆ. ಹೀಗಿದ್ದೂ ಸಮಾಜದಲ್ಲಿ ಮಾನವನನ್ನು ಮಾನವನು ದ್ವೇಷಿಸುತ್ತಾನೆ; ದುರ್ಬಲರನ್ನು ಪ್ರಬಲರು ಶೋಷಿಸುತ್ತಾರೆ; ಮಾನವೀಯತೆಯನ್ನು ಮರೆತು ಮಾನವನು ಸ್ವಾರ್ಥಿಯಾಗುತ್ತಾನೆ. ಈ ವಿಪರ್ಯಾಸವನ್ನು ತೀವ್ರವಾಗಿ ವಿರೋಧಿಸುತ್ತಾರೆ ಸ್ವಾಮೀಜಿ. ''ಭರತಖಂಡದಲ್ಲಿ ದಬ್ಬಾಳಿಕೆಗೆ ತುತ್ತಾದ ಈ ನಿರ್ಭಾಗ್ಯರು ತಮ್ಮ ನಿಜಸ್ವರೂಪವನ್ನು ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಸ್ತ್ರೀಪುರುಷ ಮತ್ತು ಮಗು ಜಾತಿ–ಕುಲ–ಗೋತ್ರಗಳ ಭೇದವಿಲ್ಲದೆ, ದುರ್ಬಲರು–ಬಲಾಢ್ಯರು ಎಂಬ ಭೇದಭಾವವಿಲ್ಲದೆ, ಸಬಲ–ದುರ್ಬಲರ ಹಿಂದೆ, ಉಚ್ಚ–ನೀಚರ ಹಿಂದೆ, ಪ್ರತಿಯೊಬ್ಬರಲ್ಲಿಯೂ ಅನಂತಾತ್ಮನಿರುವನು ಎಂಬುದನ್ನು ಅರಿತುಕೊಳ್ಳಲಿ. ಎಲ್ಲರೂ ಸತ್ಪುರುಷರಾಗುವುದಕ್ಕೆ ಅನಂತ ಅವಕಾಶವಿದೆ...'' ಎನ್ನುತ್ತಾರೆ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೨೨)*

ಮಾನವನು ತನ್ನ ಅಂತರಂಗದಲ್ಲಿರುವ ದಿವ್ಯತೆಯನ್ನು ಅರಿತುಕೊಂಡಾಗಲೇ ಅವನಲ್ಲಿ ಎಲ್ಲ ಶಕ್ತಿ–ಸಾಮರ್ಥ್ಯಗಳು ಜಾಗೃತವಾಗುವುವು ಎಂದು ಸ್ವಾಮೀಜಿ ಸಾರುತ್ತಾರೆ. ವೇದಾಂತದ ಅಗಾಧ ತತ್ತ್ವಗಳನ್ನು ಜನಸಾಮಾನ್ಯರಿಗೆ ತಲುಪಿಸುವುದರಿಂದ ಮಾತ್ರ ಎಲ್ಲೆಡೆ ಆಧ್ಯಾತ್ಮಿಕ ಆದರ್ಶ ಹರಡುವುದು; ಇದರಿಂದ ಮಾತ್ರವೇ ಸಂಸ್ಕೃತಿಯು ಉನ್ನತ ಸ್ತರಕ್ಕೇರುವುದು. ಈ ಕಾರಣದಿಂದಲೇ ಸ್ವಾಮೀಜಿ ಆತ್ಮಜಾಗೃತಿಗೆ ಹೆಚ್ಚಿನ ಮಹತ್ವ ನೀಡಿದ್ದರು. ಅವರು ಭಾರತದಲ್ಲಿ ಹಾಗೂ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಒತ್ತು ನೀಡಿ ಸಾರಿದ ಮಹಾತತ್ತ್ವವೇ ಇದು – **ಮಾನವನ ದಿವ್ಯತೆ.**

ಕೇವಲ ತತ್ತ್ವವಾಗಿ ಮಾತ್ರ ಉಳಿದರೆ, ಅದರಿಂದ ಪ್ರಯೋಜನವೇನು? ಉನ್ನತ ಆದರ್ಶ–ತತ್ತ್ವಗಳನ್ನು ಜನಜೀವನದಲ್ಲಿ ಅನುಸರಿಸಿದರೆ ಮಾತ್ರ ಅದು ಅರ್ಥಪೂರ್ಣವಾಗುವುದು. ಇದನ್ನು ಸ್ವತಃ ತಮ್ಮ ಜೀವನದಲ್ಲಿ ಅನುಷ್ಠಾನ ಮಾಡುವುದರಿಂದ ಮಾನವನು ದಿವ್ಯತೆಯ ನೆಲೆಗೇರುವನು. ಇದಕ್ಕಾಗಿ ಸಮಾಜವನ್ನು ತಯಾರು ಮಾಡುವುದು ಬಹಳ ಮುಖ್ಯವೆಂದು ಸ್ವಾಮೀಜಿ ಸಾರುತ್ತಾರೆ. ಶಿಕ್ಷಣ, ವಾಣಿಜ್ಯ ವ್ಯವಹಾರ, ಸಾಮಾಜಿಕ ನಡವಳಿಕೆ, ಕಲೆ–ಸಂಸ್ಕೃತಿ ಎಲ್ಲವೂ ಆಧ್ಯಾತ್ಮಿಕ ಬದುಕಿಗೆ ಪೂರಕವಾಗಿ ಸಾಗುವುದರಿಂದ, ಸಮಾಜದಲ್ಲಿ ಆಧ್ಯಾತ್ಮಿಕ ತರಬೇತಿ ಸಹಜವಾಗಿ ನಡೆಯುವುದು. ಭಾರತದಲ್ಲಿ ಇಂತಹ ಪ್ರಕ್ರಿಯೆ ಸಹಸ್ರಾರು ವರ್ಷಗಳಿಂದ ನಡೆದು ಬಂತು. ಆದ್ದರಿಂದ ಧರ್ಮ–ಆಧ್ಯಾತ್ಮಿಕತೆಗಳೇ ನಮ್ಮ ಜನಾಂಗದ ಸರ್ವಸ್ವವೆಂದು ಸ್ವಾಮೀಜಿ ಸಾರಿದರು.

## ಆತ್ಮವಿಶ್ವಾಸ–ನಿರ್ಭೀತಿ

ತಮ್ಮ ಪರಿವ್ರಾಜಕ ದಿನಗಳಲ್ಲಿ ಭಾರತದ ಉದ್ದಗಲ ಸಂಚರಿಸಿದ ಸ್ವಾಮಿ ವಿವೇಕಾನಂದರು, ಹಲವು ಶತಮಾನಗಳ ದಾಸ್ಯದಿಂದಾಗಿ ನಮ್ಮ ದೇಶದ ಜನತೆ ದೌರ್ಬಲ್ಯ, ಹೇಡಿತನ, ದಾಸ್ಯ ಮನೋಭಾವಕ್ಕೆ ತುತ್ತಾಗಿ ಜೀವಂತಿಕೆಯನ್ನೇ ಕಳೆದುಕೊಂಡಿದ್ದನ್ನು ಕಣ್ಣಾರೆ ಕಂಡಿದ್ದರು. ಈ ಪರಿಸ್ಥಿತಿಯಿಂದ ಜನರನ್ನು ಮೇಲೆತ್ತಲು ಅವರಿಗೆ ಸ್ಫೂರ್ತಿ, ಉತ್ಸಾಹ ತುಂಬುವಂತಹ ಸಂದೇಶಗಳನ್ನು ಸ್ವಾಮೀಜಿ ಕೊಟ್ಟರು. ''ಯಾವನು ಅಹೋರಾತ್ರಿ ತಾನು ಯಾವ ಕೆಲಸಕ್ಕೂ ಬರದವನೆಂದು ಭಾವಿಸುವನೋ, ಅವನಿಂದ ಜಗತ್ತಿಗೆ ಯಾವ ಪ್ರಯೋಜನವೂ ಆಗುವಂತಿಲ್ಲ.. ನಾವು

ಸರ್ವಶಕ್ತನ ಪುತ್ರರೂ, ಅನಂತವಾದ, ದಿವ್ಯವಾದ ಜ್ವಾಲೆಯ ಕಿಡಿಗಳೂ ಆಗಿರುವಾಗ, ನಾವು ಕೆಲಸಕ್ಕೆ ಬಾರದವರಾಗುವುದು ಹೇಗೆ? '' *(ಅಲ್ಲೇ, ಪು.೨೩೬)*

**ನಿರ್ಭೀತಿ** ಎಂಬುದೇ ಉಪನಿಷತ್ತುಗಳ ಪಲ್ಲವಿ. 'ಹೇಡಿತನವನ್ನು ಹೊಂದದೆ, ಜೀವನವೆಂಬ ರಣರಂಗದಲ್ಲಿ ಹೋರಾಡಿ ಗೆದ್ದು ಬಾ' ಎಂಬುದೇ ಗೀತೆಯ ಕರೆ. ವೇದಾಂತ ಹೇಳುವ ತತ್ತ್ವವೂ ಇದೇ – ಸರ್ವವ್ಯಾಪಿಯಾದ, ಹುಟ್ಟುಸಾವುಗಳಿಲ್ಲದ ಆತ್ಮವೇ ನೀನಾಗಿದ್ದರೆ, ನಿನಗೆ ಭಯವೇಕೆ? ದುಃಖವೇಕೆ? ಆತ್ಮನ ಅರಿವಿನೊಂದಿಗೆ ಬದುಕು – ಆಗ ಎಲ್ಲ ವೈಭವವೂ ನಿನ್ನದಾಗುವುದು. ''ನಮಗೆ ಇಂದು ಬೇಕಾಗಿರುವುದೇ ಆತ್ಮನಿಗೆ ಸಂಬಂಧಪಟ್ಟ ಭಾವನೆ, ಅದರ ಅನಂತಶಕ್ತಿ, ಪರಿಶುದ್ಧತೆ ಮತ್ತು ಪರಿಪೂರ್ಣತೆ... ನೀವು ಶ್ರೇಷ್ಠರೆಂದು ಭಾವಿಸಿ, ಶ್ರೇಷ್ಠರಾಗುವಿರಿ.'' *(ಅಲ್ಲೇ, ಪು.೧೨೦).*

ಸ್ವಾಮೀಜಿ ವಾಣಿಯಲ್ಲಿ ಉಪನಿಷತ್, ಗೀತೆ ಹಾಗೂ ಇತರ ವೇದಾಂತವಾಕ್ಯಗಳ ಧೀರನುಡಿಗಳು ಮಾರ್ದನಿಸುತ್ತಿವೆ. ಅವರು ದೇಹತ್ಯಾಗ ಮಾಡಿ ನೂರ ಇಪ್ಪತ್ತೈದು ವರ್ಷಗಳೇ ಕಳೆದಿವೆ; ಆದರೆ ಅವರ ವಾಣಿ ಮಾತ್ರ ಎಲ್ಲಡೆ ಶಕ್ತಿಸಂಚಾರ ಮಾಡುತ್ತಾ ಯುವಕರಲ್ಲಿ, ಎಳೆಯರಲ್ಲಿ, ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತಿದೆ.

ಕೇವಲ ವೇದಾಂತದ ಗಹನ ತತ್ತ್ವವನ್ನು ಎಲ್ಲ ಜನರಿಗೂ ಅರ್ಥವಾಗುವಂತೆ ವಿವರಿಸಿದ್ದು ಮಾತ್ರವೇ ಸ್ವಾಮೀಜಿ ಮಾಡಿದ ಕಾರ್ಯವಲ್ಲ ; ಅದನ್ನು ಅನುಷ್ಠಾನ ಮಾಡುವುದು ಹೇಗೆ, ಆಧುನಿಕ ಕಾಲಕ್ಕೂ ನಮ್ಮ ಪುರಾತನ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವುದು ಹೇಗೆ ಎಂಬುದನ್ನು ಅವರು ತೋರಿಸಿಕೊಟ್ಟರು. ನಾಲ್ಕು ಯೋಗಗಳ ಮೇಲೆ ಅವರು ನೀಡಿದ ಉಪನ್ಯಾಸಗಳು ಆಧ್ಯಾತ್ಮಿಕ ಸಾಧಕರಿಗೆ ಅತ್ಯುತ್ತಮ ಮಾರ್ಗದರ್ಶಕ ಗ್ರಂಥಗಳಾಗಿ ಹೊರಬಂದಿವೆ.

### ಸೇವೆಯ ಆದರ್ಶ

'ಎಲ್ಲ ಮಾನವರಲ್ಲಿ ಭಗವಂತನಿದ್ದಾನೆ. ಈ ಅರಿವನ್ನು ಹೊಂದಿದ್ದರೆ, ನೀನು ಅವನಿಗೆ ಸೇವೆಯನ್ನು ಮಾತ್ರ ಮಾಡಬಲ್ಲೆ' — ಎಂಬ ಹೊಸ ವಿಚಾರವನ್ನು ಶ್ರೀರಾಮಕೃಷ್ಣರಿಂದ ತಿಳಿದುಕೊಂಡರು ಸ್ವಾಮೀಜಿ. 'ಶಿವಜ್ಞಾನೇ ಜೀವಸೇವಾ'–ಎಂದರೆ, ಪ್ರತಿ ಜೀವಿಯ ಅಂತರ್ಯದಲ್ಲಿ ಶಿವನಿದ್ದಾನೆ ಎಂಬ ಜ್ಞಾನವನ್ನು ಹೊಂದಿ, ಎಲ್ಲ ಜೀವಿಗಳ ಸೇವೆ ಮಾಡಬೇಕು ಎಂದು ಶ್ರೀರಾಮಕೃಷ್ಣರು ದಿವ್ಯಭಾವದಲ್ಲಿ ನುಡಿದಿದ್ದರು. ಅದ್ವೈತ ವೇದಾಂತವು ಸಾರುವ 'ಜೀವೋ ಬ್ರಹ್ಮೈವ ನಾಪರಃ'— ಜೀವನೇ ಬ್ರಹ್ಮವಲ್ಲದೆ ಬೇರಲ್ಲ ಎಂಬ ತತ್ತ್ವವನ್ನೇ ಶ್ರೀರಾಮಕೃಷ್ಣರು ಬೇರೆ ಮಾತುಗಳಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ತತ್ತ್ವವೇ **'ಸೇವೆ'**. ತತ್ತ್ವವನ್ನು ಜೀವನದಲ್ಲಿ ಕಾರ್ಯರೂಪಕ್ಕೆ ತರುವ ವಿಧಾನವೇ ಇದು. ಶ್ರೀರಾಮಕೃಷ್ಣರು ಭಾವದಲ್ಲಿ ಹೇಳಿದ್ದ ಸೂಚನೆಯ ಮಾತನ್ನು ಸ್ವಾಮೀಜಿ ಸಮಗ್ರವಾಗಿ ಗ್ರಹಿಸಿ, ಆ ಮಾತುಗಳ ಆಧಾರದಲ್ಲಿ ಸೇವೆಯ ಆದರ್ಶವನ್ನು ಜಗತ್ತಿನೆಲ್ಲೆಡೆ ಸಾರಿದರು.

ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿಬಂದ ಬಳಿಕ ಸ್ವಾಮೀಜಿ ಭಾರತದ ಪರಿಸ್ಥಿತಿಗೆ ಯೋಗ್ಯವಾಗುವ ರೀತಿಯಲ್ಲಿ ಕೆಲಸ ಮಾಡಲು ಸಂಸ್ಥೆಯೊಂದರ ಆವಶ್ಯಕತೆಯಿದೆ ಎಂಬುದನ್ನು ಕಂಡುಕೊಂಡರು. ವಿದೇಶಗಳಲ್ಲಿ ದೊಡ್ಡ ದೊಡ್ಡ ಸಂಸ್ಥೆಗಳು ಅಸಾಧಾರಣ ಕಾರ್ಯವನ್ನು ನಡೆಸುತ್ತಿವೆ; ಆದರೆ ಭಾರತದಲ್ಲಿ ಅದು ಸಾಧ್ಯವಾಗಿಲ್ಲ – ಒಗ್ಗಟ್ಟಿನ ಕೊರತೆ; ಅಸೂಯೆ, ದ್ವೇಷ, ಕೀಳರಿಮೆಗಳಂತಹ ಕ್ಲೇಶಗಳು ಇಲ್ಲಿನ ಜನರನ್ನು ಕಿತ್ತು ತಿನ್ನುತ್ತಿವೆ ಎಂದು ಅವರು ಅರ್ಥಮಾಡಿಕೊಂಡರು. ಇದನ್ನು ತೊಡೆದು ಹಾಕಲು 'ತ್ಯಾಗ ಮತ್ತು ಸೇವೆ' ಎಂಬ ಅವಳಿ ಆದರ್ಶಗಳನ್ನು ಅವರು ನಮ್ಮ ದೇಶದ ಜನರ ಮುಂದಿಟ್ಟರು. ಈ ಆದರ್ಶಗಳ ಸಾಕಾರ ರೂಪವಾಗಿ ಹುಟ್ಟಿದ ಸಂಸ್ಥೆಗಳೇ 'ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್'. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** — ಅಂದರೆ, ತನ್ನ ವೈಯಕ್ತಿಕ ಸಾಕ್ಷಾತ್ಕಾರಕ್ಕಾಗಿ, ಹಾಗೂ ಜಗತ್ತಿನ ಹಿತಕ್ಕಾಗಿ – ಎಂಬುದೇ ಈ ಸಂಸ್ಥೆಗಳ ಧ್ಯೇಯವಾಕ್ಯವಾಯಿತು. ಈ ಮೂಲಕ ವೈಯಕ್ತಿಕವಾಗಿ ಆಧ್ಯಾತ್ಮಿಕ ಬೆಳವಣಿಗೆ ಉಂಟಾಗಬೇಕು; ಅದಕ್ಕೆ ಪೂರಕವಾಗಿ ಜನರ ಸಮಸ್ಯೆ, ಕಷ್ಟಕಾರ್ಪಣ್ಯಗಳಿಗೆ ಪರಿಹಾರ ನೀಡುವ ಸೇವಾಕಾರ್ಯಗಳು ಒಟ್ಟು ಸಮಾಜದ ಅಭಿವೃದ್ಧಿಗೆ ಸಹಕಾರ ನೀಡಬೇಕು – ಈ ಸ್ಪಷ್ಟ ನಿರ್ದೇಶನದೊಂದಿಗೆ ರಾಮಕೃಷ್ಣ ಮಠ ಮತ್ತು ಮಿಷನ್ ಮುನ್ನಡೆಯಿತು.

ಭಾರತದಲ್ಲಿ ವೇದಾಂತ ತತ್ತ್ವಗಳು ಆಧ್ಯಾತ್ಮಿಕ–ಧಾರ್ಮಿಕ–ಸಾಂಸ್ಕೃತಿಕ ರಂಗಗಳಲ್ಲಿ ಅತ್ಯುನ್ನತ ಹಂತಕ್ಕೇರಿದ್ದರೂ, ಅದನ್ನು ಪ್ರಾಯೋಗಿಕ ಜೀವನದಲ್ಲಿ ಕಂಡುಕೊಳ್ಳುವ ಮಾರ್ಗ ಇನ್ನೂ ಸ್ಪಷ್ಟವಾಗಿರಲಿಲ್ಲ. ವೇದಾಂತವೆಂದರೆ ಅದು ಸಂನ್ಯಾಸಿಗಳ ಧರ್ಮವೆಂದೇ ಪರಿಗಣಿಸಲಾಗುತ್ತಿತ್ತು. ಸೇವಾ ಮಾರ್ಗದ ಮೂಲಕ ವೇದಾಂತದ ಉನ್ನತ ತತ್ತ್ವಗಳಿಗೆ ಹೊಸ ಅರ್ಥವನ್ನು ನೀಡಿ, ನವಭಾರತದ ಉತ್ಥಾನಕ್ಕೆ ಮುನ್ನುಡಿ ಬರೆದರು ಸ್ವಾಮೀಜಿ.

### ಪ್ರಾಯೋಗಿಕ ಧರ್ಮ

ಆಧ್ಯಾತ್ಮಿಕತೆ, ಧರ್ಮ ಇವು ಕೇವಲ ತತ್ತ್ವರೂಪದಲ್ಲಿ ಹಾಗೂ ಬೌದ್ಧಿಕ ನೆಲೆಯಲ್ಲಿ ಉಳಿದರೆ ಸಾಲದು; ಅವುಗಳನ್ನು ಅನುಷ್ಠಾನಕ್ಕೆ ತಂದರೆ ಮಾತ್ರವೇ ಆ ತತ್ತ್ವಗಳಿಗೆ ಬೆಲೆಯಿರುತ್ತದೆ ಎಂದು ಬಲವಾಗಿ ನಂಬಿದ್ದರು ಸ್ವಾಮೀಜಿ. ಪ್ರಾಯೋಗಿಕವಲ್ಲದ ಧರ್ಮವು ಧರ್ಮವೇ ಅಲ್ಲ; ಅನುಷ್ಠಾನಯೋಗ್ಯವಲ್ಲದ ತತ್ತ್ವವು ತತ್ತ್ವವೇ ಅಲ್ಲ ಎಂಬುದನ್ನು ಭಾರತವು ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದಿತ್ತು. **'ವಾಗ್ವೈಖರೀ ಶಬ್ದಝರೀ**

**ಶಾಸ್ತ್ರವ್ಯಾಖ್ಯಾನ ಕೌಶಲಮ್। ವೈದುಷ್ಯಂ ವಿದುಷಾಂ ತದ್ವದ್ ಭುಕ್ತಯೇ ನ ತು ಮುಕ್ತಯೇ'**–'ಪಂಡಿತರ ಮಾತಿನ ಪ್ರೌಢಿಮೆ, ಶಬ್ದಗಳ ಪ್ರವಾಹ, ಶಾಸ್ತ್ರವಿವರಣೆಯಲ್ಲಿ ಕೌಶಲ ಮತ್ತು ಪಾಂಡಿತ್ಯ – ಇವು ಭೋಗಕ್ಕೆ ಸಾಧನವಾಗಬಲ್ಲವು, ಮುಕ್ತಿಗಲ್ಲ' ಎಂದು ವಿವೇಕಚೂಡಾಮಣಿ ಹೇಳುತ್ತದೆ. ಆದರೆ ಈ ಬಗೆಯ ವಿವೇಚನೆ ಜನಸಾಮಾನ್ಯರನ್ನು ತಲುಪಿರಲಿಲ್ಲ. ಪ್ರತಿಯೊಬ್ಬರೂ ಆಧ್ಯಾತ್ಮಿಕ ಜೀವನವನ್ನು ನಡೆಸುವುದು, ಜೀವನದ ನರನಾಡಿಗಳಲ್ಲಿ ಭಗವಂತನ ಭಾವ ಹರಿದಾಡುವುದು, ಇತರರಿಗಾಗಿ ಬದುಕುವುದು, ಸಾಕ್ಷಾತ್ಕಾರವೇ ಜೀವನದ ಗುರಿ ಎಂದು ಎಲ್ಲರೂ ಕಂಡುಕೊಳ್ಳುವುದು — ಇದನ್ನು ಸಾಧಿಸಬೇಕು ಎಂದು ಸ್ವಾಮೀಜಿ ಬಯಸಿದ್ದರು. ತಮ್ಮ ಪ್ರವಚನ, ಬರಹಗಳ ಮೂಲಕ ಸ್ವಾಮೀಜಿ ಸಾರಿದ್ದು **ಪ್ರಾಯೋಗಿಕ ಧರ್ಮ**ವನ್ನು.

## ಹೃದಯವಂತಿಕೆ

ಬುದ್ಧಿ ಮತ್ತು ಹೃದಯ – ಇವೆರಡೂ ಸಮರ್ಪಕವಾಗಿ ವಿಕಾಸವಾಗಬೇಕು ಎಂದು ಸ್ವಾಮೀಜಿ ಹೇಳುತ್ತಿದ್ದರು. ಕೇವಲ ಬುದ್ಧಿ ಮಾತ್ರ ಬೆಳೆದರೆ ಮನುಷ್ಯನು ಹೃದಯಹೀನನಾಗುತ್ತಾನೆ; ಅದರಿಂದ ಅನಾಹುತವುಂಟಾಗುವುದೇ ಅಧಿಕ. ಅದೇ ರೀತಿ, ಹೃದಯ ಮಾತ್ರ ವಿಕಾಸಗೊಂಡರೆ ವ್ಯಕ್ತಿಯು ಭಾವುಕನಾಗುತ್ತಾನೆ, ಅವನ ವಿವೇಕ ಕುಂಠಿತವಾಗುತ್ತದೆ. ಈ ಕಾರಣದಿಂದಲೇ ಅವರು ಶಂಕರರ ಬುದ್ಧಿ ಹಾಗೂ ಬುದ್ಧನ ಹೃದಯ – ಇವೆರಡರ ಸಮನ್ವಯವನ್ನು ಬಯಸಿದ್ದರು. ಸ್ವತಃ ಸ್ವಾಮೀಜಿಯವರಲ್ಲೇ ಇವೆರಡರ ಸುಂದರ ಸಮ್ಮಿಳನವನ್ನು ನಾವು ಕಾಣಬಹುದು.

ಆದರೂ, ಬುದ್ಧಿ–ಹೃದಯ ಇವೆರಡರಲ್ಲಿ ಸಂಘರ್ಷವುಂಟಾದಾಗ, ನಾವು ಹೃದಯವನ್ನು ಅನುಸರಿಸಬೇಕು ಎಂದರು ಸ್ವಾಮೀಜಿ. ಕಾರಣ, ಹೃದಯವೆಂಬುದು ಬದುಕನ್ನು ಅರಳಿಸುವುದು, ಮುಳುಗುವವನನ್ನು ಹಿಡಿದೆತ್ತಬಲ್ಲದು, ಹಾನಿಯನ್ನು ತಡೆಗಟ್ಟುವುದು. ಮಾನವಪ್ರೀತಿ, ಇತರರಲ್ಲಿ ಸಹಾನುಭೂತಿ, ಪರಸ್ಪರ ಒಂದಾಗಿಸುವ ಮನೋಭಾವ – ಈ ಗುಣಗಳು ಮಾನವನನ್ನು ಭಗವಂತನ ಸಮೀಪಕ್ಕೆ ಕರೆದೊಯ್ಯುವುದು. ಎಂಥ ಪ್ರಚಂಡ ಬುದ್ಧಿ ಕೂಡ ಕೆಲವೊಮ್ಮೆ ಪತನದತ್ತ ಸಾಗುವ ಸಾಧ್ಯತೆಯಿದೆ; ಆಗ ಅದನ್ನು ಉಳಿಸಬಲ್ಲ ಸಾಮರ್ಥ್ಯ ಹೃದಯಕ್ಕಿದೆ – ಎಂದು ಸ್ವಾಮೀಜಿ ನಂಬಿದ್ದರು. ಅವರ ಜೀವನದಲ್ಲೇ ಹಲವು ಘಟನೆಗಳು ಇದನ್ನು ಪುಷ್ಟೀಕರಿಸುತ್ತವೆ.

ಕೇವಲ ಭಾರತದ ಜನತೆಯಷ್ಟೇ ಅಲ್ಲ; ಪ್ರತಿಯೊಬ್ಬ ಮಾನವನೂ ತನ್ನ ಕಾಲ ಮೇಲೆ ತಾನು ನಿಂತು, ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕು ಎಂದು ಸ್ವಾಮಿ ವಿವೇಕಾನಂದರು ಬಯಸಿದ್ದರು. ಈ ವಿಶಾಲದೃಷ್ಟಿ ಅವರಿಗೆ ಎಲ್ಲಿಂದ ಬಂತು? ತಮ್ಮ ಗುರು ಶ್ರೀರಾಮಕೃಷ್ಣರ ಅದ್ಭುತ ಜೀವನದಿಂದಲೆ? ರಾಮ, ಕೃಷ್ಣ, ಬುದ್ಧ ಮೊದಲಾದ ಅವತಾರ ಪುರುಷರ ಜೀವನದಿಂದಲೆ? ವೇದಾಂತ ತತ್ತ್ವಗಳಿಂದಲೆ? – ಈ ಎಲ್ಲವೂ ಸೇರಿ ಸ್ವಾಮೀಜಿಯವರ ವಿಶಾಲ ಹೃದಯವಂತಿಕೆಯನ್ನು ರೂಪಿಸಿರಬಹುದು. ಆದರೆ ಈ ಭಾವನೆ ಎಲ್ಲಿಂದ ಬಂತು ಎಂಬುದು ಮುಖ್ಯವಲ್ಲ; ಇಂಥ ಮಹಾವ್ಯಕ್ತಿಯೊಬ್ಬ ನಮ್ಮ ದೇಶದಲ್ಲಿ ರೂಪುಗೊಂಡನಲ್ಲ ಎಂಬುದಷ್ಟೇ ಮುಖ್ಯ. ಈ ಕಾರಣದಿಂದಲೇ ಸ್ವಾಮೀಜಿ ಆಧುನಿಕ ಭಾರತದಲ್ಲಿ ಎಲ್ಲರ ಆದರ್ಶವ್ಯಕ್ತಿಯಾಗಿ ಸ್ವೀಕೃತರಾಗಿದ್ದಾರೆ. ಸಂನ್ಯಾಸಿಗಳಿಗೆ, ಗೃಹಸ್ಥರಿಗೆ, ಯುವಕರಿಗೆ, ಮಕ್ಕಳಿಗೆ, ಮಹಿಳೆಯರಿಗೆ, ವೃದ್ಧರಿಗೆ, ಬಡವ ಬಲ್ಲಿದರಿಗೆ, ದೀನ–ದಲಿತರಿಗೆ, ಹಾಗೂ ಜನಸಾಮಾನ್ಯರಿಗೆ ಅವರು ಆದರ್ಶವ್ಯಕ್ತಿಯಾಗಿದ್ದಾರೆ. ಎಲ್ಲರ ಏಳಿಗೆಯನ್ನು ಉಂಟುಮಾಡಬಲ್ಲ ಸಮಗ್ರ ಶಿಕ್ಷಣ ವ್ಯವಸ್ಥೆಯನ್ನು ಸ್ವಾಮೀಜಿ ಪ್ರತಿಪಾದಿಸಿದ್ದರು:

''ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು'' *(ಕೃ.ಸಂ.೪, ಪು.೧೧೧)*, ''ಎಲ್ಲಾ ವಿದ್ಯಾಭ್ಯಾಸದ ಗುರಿ, ತರಬೇತಿಯ ಗುರಿ ಪುರುಷಸಿಂಹರನ್ನು ಮಾಡುವುದು.. ಎಲ್ಲಾ ತರಬೇತಿಯ ಗುರಿ ಮನುಷ್ಯನ ಬೆಳವಣಿಗೆಗೆ ಸಹಾಯ ಮಾಡುವುದು.. ಆತ ಸಿದ್ಧನಾದರೆ ಏನನ್ನು ಬೇಕಾದರೂ ಮಾಡಬಲ್ಲ. ಇಚ್ಛೆಸಿದುದೆಲ್ಲವನ್ನೂ ಮಾಡಬಲ್ಲ.'' *(ಕೃ.ಸಂ. ೬, ಪು.೧೩೫)* ''ರಾಷ್ಟ್ರದ ಆಧ್ಯಾತ್ಮಿಕ ಮತ್ತು ಲೌಕಿಕ ಶಿಕ್ಷಣದ ಮೇಲೆ ನಮಗೆ ಒಂದು ಹತೋಟಿ ಇರಬೇಕು. ಇದನ್ನು ನೀವು ಕನಸು ಕಾಣಬೇಕು, ಮಾತನಾಡಬೇಕು, ಆಲೋಚಿಸಬೇಕು, ಇದನ್ನು ಅನುಷ್ಠಾನಕ್ಕೆ ತರಬೇಕು. ಅಲ್ಲಿಯವರೆಗೂ ನಮ್ಮ ದೇಶಕ್ಕೆ ಮೋಕ್ಷ ಇಲ್ಲ.. ಜೀವನವನ್ನು ನಿರ್ಮಾಣ ಮಾಡುವಂತಹ, ಪುರುಷಸಿಂಹರನ್ನು ಮಾಡುವಂತಹ, ಶೀಲಸಂಪತ್ತಿಗೆ ಸಹಾಯ ಮಾಡುವಂತಹ, ವಿಚಾರಗಳನ್ನು ಗ್ರಹಿಸುವಂತಹ ವಿದ್ಯಾಭ್ಯಾಸ ನಮಗೆ ಬೇಕು.'' *(ಕೃ. ಸಂ.೩, ಪು. ೧೬೩–೬೪)*

ಸ್ವಾಮಿ ವಿವೇಕಾನಂದರ ಶೈಕ್ಷಣಿಕ ವಿಚಾರಗಳು ಭಾರತದ ಶಿಕ್ಷಣ ನೀತಿಯ ಅಂಗವಾಗಬೇಕು. ಶಿಕ್ಷಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಇದು ಹೊಸ ದಿಕ್ಕುಗಳನ್ನು ತೆರೆಯುವುದು. ಈ ಮೂಲಕ ದೇಶದ ಪ್ರಗತಿ ಕ್ಷಿಪ್ರಗತಿಯಿಂದ ಸಾಗಿ, ನಮ್ಮ ಜನಜೀವನ ಉನ್ನತ ನೆಲೆಗೇರುವುದರಲ್ಲಿ ಸಂದೇಹವಿಲ್ಲ.

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೦೮ | ಬುಧವಾರ | ಸ್ವಾಮಿ ಅಭೇದಾನಂದ ಜಯಂತಿ |
| ೧೦ | ಮಂಗಳವಾರ | ಏಕಾದಶಿ |
| ೧೪ | ಶನಿವಾರ | ಸ್ವಾಮಿ ಅಖಂಡಾನಂದ ಜಯಂತಿ |
| ೨೧ | ಶನಿವಾರ | ಮಹಾಸಪ್ತಮಿ |
| ೨೨ | ಭಾನುವಾರ | ಮಹಾಅಷ್ಟಮಿ |
| ೨೩ | ಸೋಮವಾರ | ಮಹಾನವಮಿ |
| ೨೪ | ಶನಿವಾರ | ವಿಜಯದಶಮಿ, ಶ್ರೀಮಧ್ವಜಯಂತಿ |
| ೨೫ | ಬುಧವಾರ | ಏಕಾದಶಿ |